**2018 ಕ.ತೀ.ವ. 973**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಡಾ|| ವಿನೀತ್ ಕೊಠಾರಿ**

**ಶ್ರೀಮತಿ ಯಾಸ್ಮಿನ್ –ವಿರುದ್ಧ– ಕರ್ನಾಟಕ ರಾಜ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಮತ್ತು ಮತ್ತೊಬ್ಬರು***

ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ.

ಅರ್ಜಿದಾರರು, ಗ್ರಾಮ ಪಂಚಾಯಿತಿ, ಗೋಣಿಕೊಪ್ಪ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯ ಸಂಬಂಧದಲ್ಲಿ ಚುನಾವಣಾ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಈ ನ್ಯಾಯಾಲಯದ ಮುಂದೆ ಪ್ರಸ್ತುತ ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾರೆ ಮತ್ತು ಸದರಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಜಿದಾರರಿಗೆ ಅನುಮತಿ ನೀಡುವಂತೆ ಮತ್ತು ಸದರಿ ಹುದ್ದೆಗಾಗಿ ಆಕೆಯ ನಾಮಪತ್ರವನ್ನು ಅಂಗೀಕರಿಸುವಂತೆ ಪ್ರತ್ಯರ್ಜಿದಾರ– ಸಹಾಯಕ ನಿರ್ದೇಶಕರಿಗೆ ನಿರ್ದೇಶಿಸುವಂತೆ ಕೋರಿದ್ದಾರೆ. ಅರ್ಜಿದಾರರನ್ನು ದಿನಾಂಕ 20.04.2016 ರಂದು ರಿಟರ್ನಿಂಗ್ ಅಧಿಕಾರಿಯು ನೀಡಿದ ಮತದಾರ ಪತ್ರದ ಪ್ರಮಾಣಪತ್ರವನ್ನು ನೋಡಿ ದಿನಾಂಕ 20.04.2016 ರಂದು ನಡೆದ ಚುನಾವಣೆಯಲ್ಲಿ ಸದರಿ ಗ್ರಾಮ ಪಂಚಾಯಿತಿಗೆ ಚುನಾಯಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು, 1995 ಕರ್ನಾಟಕ

* ರಿಟ್ ಅರ್ಜಿ ಸಂ.32175/2016 (ಎಲ್‌ಬಿ–ಇಎಲ್‌ಇ), ದಿನಾಂಕ: 7ನೇ ಜೂನ್, 2016.

ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತ್‌ಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು, 1994ರ 3ಎ, 3ಬಿ ಮತ್ತು 3ಡಿ ನಿಯಮಗಳಿಗೆ ಸಮಾನವಾಗಿವೆ ಮತ್ತು ಅದೇ ಅರ್ಹತೆಯನ್ನು ಹೊಂದಿರುವುದರಿಂದ, ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಾಗಿ ವಿವಿಧ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ನಿಗದಿತ ಸಮಯವನ್ನು ವಿಸ್ತರಿಸಲು ಚುನಾವಣಾಧಿಕಾರಿಗೆ ಯಾವುದೇ ವಿವೇಚನಾಧಿಕಾರವಿರುವುದಿಲ್ಲ. ವಾಸ್ತವಿಕ ಚುನಾವಣೆ ಅಥವಾ ಚುನಾವಣೆಗಾಗಿ ಮತಹಾಕಲು, ಆ ಸಭೆಯ ನೋಟೀಸಿನ ಪ್ರಕಾರ ಅಗತ್ಯವಿದ್ದಲ್ಲಿ, ಆ ಸಭೆಗಾಗಿ ಕೋರಂನ ಹಾಜರಾತಿಗೆ ಅಗತ್ಯಪಡಿಸಿದ್ದು, ನಾಮಪತ್ರಗಳನ್ನು ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಸದಸ್ಯರ ಕೋರಂ ಅಗತ್ಯವಿರುವುದಿಲ್ಲ. ಆದ್ದರಿಂದ, ಹಿಂಬರಹ ಅನುಬಂಧ–ಸಿಯನ್ನು ಸದರಿ ಹುದ್ದೆಗೆ ಅಭ್ಯರ್ಥಿಯಾಗಿರದ ಬಿ.ಎನ್. ಪ್ರಕಾಶ್‌ರವರಿಗೆ ಬರೆಯಲಾಗಿದ್ದರೂ, ಅದನ್ನು ಮೇಲ್ನೋಟಕ್ಕೆ ಕಾಣುವಂತೆ ಅರ್ಥೈಸಲಾಗಿದ್ದು, ಹೆಚ್ಚೆಂದರೆ ಅದು ಸುಸಂಬದ್ಧ ಕಾನೂನು ಉಪಬಂಧಗಳ ತಪ್ಪುಗ್ರಹಿಕೆಯಾಗಿದೆ. ಆದರೆ, ಹಾಗಾಗಿದ್ದರೂ ವಿಳಂಬವಾಗಿ ಸಹ ಆಕೆ ನಾಮಪತ್ರವನ್ನು ಸಲ್ಲಿಸಲು ಮತ್ತು ನಾಮಪತ್ರವನ್ನು ಸಹ ಹಾಗೇ ವಿಳಂಬವಾಗಿ ಸಲ್ಲಿಸಿರುವುದನ್ನು ಅಂಗೀಕರಿಸಲು ಚುನಾವಣಾಧಿಕಾರಿಗೆ ಈ ನ್ಯಾಯಾಲಯದಿಂದ ಪರಮಾದೇಶ ನಿರ್ದೇಶನಕ್ಕಾಗಿ ಕೋರಲು ಹಾಗೂ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ/ಉಪಾಧ್ಯಕ್ಷ ಹುದ್ದೆಯ ಚುನಾವಣೆಗಾಗಿ ಆಕೆ ಸ್ಪರ್ಧಿಸಿರುವುದನ್ನು ಪುರಸ್ಕರಿಸಲು ಅರ್ಜಿದಾರರಿಗೆ ಅಧಿಕಾರ ಕೊಡುವುದಿಲ್ಲ.

ಈ ಹಿಂದೆ ಹೇಳಿದಂತೆ ಅಲ್ಲದೆ, ಅರ್ಜಿದಾರರು ಸದರಿ ನಾಮಪತ್ರವನ್ನು ವಿಳಂಬವಾಗಿ ಸಲ್ಲಿಸಿದ್ದು, ಸುಸಂಬದ್ಧ ನಿಯಮಗಳಿಗೆ ಅನುಸಾರವಾಗಿ

ಸದರಿ ನಾಮಪತ್ರವು ಸಿಂಧುವಾಗದು ಮತ್ತು ನಿರ್ದಿಷ್ಟಪಡಿಸಲಾದ ಸಮಯವನ್ನು ಮೀರಿ ಸಲ್ಲಿಸಲಾಗಿದ್ದರೂ, ಅಂಥ ನಾಮಪತ್ರವನ್ನು ಅಂಗೀಕರಿಸಲು ಪ್ರತ್ಯರ್ಜಿದಾರ ಅಧಿಕಾರಿಗೆ ಪರಮಾದೇಶ ನಿರ್ದೇಶನ ನೀಡಲಾಗದೆಂದು ಸಹ ಈ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ದುರ್ಭಾವನೆಗಳು ಮತ್ತು ಸಾಂಸ್ಥಿಕ ಸಮಗ್ರತೆ ಬಗೆಗಿನ ಅಂಥ ದೃಢೋಕ್ತಿಗಳು ಅಸ್ಪಷ್ಟವಾಗಿದ್ದು, ಅವರು ಯಾವುದೇ ವಿಷಯವನ್ನು ಹೊಂದಿದ್ದೇ ಆದರೆ, ಮೊದಲಿಗೆ, ವಾಸ್ತವವಾಗಿ ದುರುದ್ದೇಶದ ದೃಢೋಕ್ತಿಗಳನ್ನು ಸ್ಪಷ್ಟವಾಗಿ ಸಮರ್ಥಿಸಬೇಕಾಗುತ್ತದೆ ಮತ್ತು ಸಾಕ್ಷ್ಯದ ಸಹಾಯದೊಂದಿಗೆ ಕ್ರಮಬದ್ಧವಾಗಿ ರುಜುವಾತುಪಡಿಸಬೇಕಾಗುತ್ತದೆ. ಕಾನೂನಿನ ದೃಷ್ಟಿಯಲ್ಲಿ ಅಂಥ ಪೂರ್ವಭಾವಿತವಾದ ದೋಷವನ್ನು ಸಾರ್ವಜನಿಕ ಪ್ರಾಧಿಕಾರದ ವಿರುದ್ಧ ಊಹಿಸಲಾಗದು. ಈ ನ್ಯಾಯಾಲಯವು, ರಿಟ್ ಅರ್ಜಿಯಲ್ಲಿ ಹೇಳಲಾದ ಯಾವುದೇ ಆಧಾರವಿಲ್ಲದ ಅಂಥ ಮನವಿಗಳನ್ನು ಅಂಗೀಕರಿಸುವುದಕ್ಕೆ ಒಲವು ತೋರದು. ಅದು ತಿರಸ್ಕರಿಸುವುದಕ್ಕೆ ಅರ್ಹವಾಗಿದೆ ಮತ್ತು ಅದಕ್ಕನುಸಾರವಾಗಿ ತಿರಸ್ಕರಿಸಲಾಗಿದೆ.

ಹಾಗಾಗಿ ಈ ರಿಟ್ ಅರ್ಜಿಯಲ್ಲಿ ಯಾವುದೇ ರೀತಿಯ ಗುಣಾರ್ಹತೆ ಕಂಡುಬಂದಿಲ್ಲ ಮತ್ತು ವಜಾಗೊಳಿಸುವುದಕ್ಕೆ ಅರ್ಹವಾಗಿದೆ ಹಾಗೂ ಅದಕ್ಕೆ ಅನುಸಾರವಾಗಿ ವಜಾಗೊಳಿಸಲಾಗಿದೆ.

ಅರ್ಜಿದಾರರ ಪರ : ಶ್ರೀ ಬಸವರಾಜು ಎಸ್. ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ವಿ. ಶ್ರೀನಿಧಿ, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ:**

ಅರ್ಜಿದಾರ–ಶ್ರೀಮತಿ ಯಾಸ್ಮಿನ್, ಗ್ರಾಮ ಪಂಚಾಯಿತಿ, ಗೋಣಿಕೊಪ್ಪ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯ ಸಂಬಂಧದಲ್ಲಿ ಚುನಾವಣಾ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಈ ನ್ಯಾಯಾಲಯದ ಮುಂದೆ ಪ್ರಸ್ತುತ ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾರೆ ಮತ್ತು ಸದರಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಜಿದಾರರಿಗೆ ಅನುಮತಿ ನೀಡುವಂತೆ ಮತ್ತು ಸದರಿ ಹುದ್ದೆಗಾಗಿ ಆಕೆಯ ನಾಮಪತ್ರವನ್ನು ಅಂಗೀಕರಿಸುವಂತೆ ಪ್ರತ್ಯರ್ಜಿದಾರ– ಸಹಾಯಕ ನಿರ್ದೇಶಕರಿಗೆ ನಿರ್ದೇಶಿಸುವಂತೆ ಕೋರಿದ್ದಾರೆ. ಅರ್ಜಿದಾರರನ್ನು ದಿನಾಂಕ 20.04.2016 ರಂದು ರಿಟರ್ನಿಂಗ್ ಅಧಿಕಾರಿಯು ನೀಡಿದ ಮತದಾರ ಪತ್ರದ ಪ್ರಮಾಣಪತ್ರವನ್ನು ನೋಡಿ ದಿನಾಂಕ 20.04.2016 ರಂದು ನಡೆದ ಚುನಾವಣೆಯಲ್ಲಿ ಸದರಿ ಗ್ರಾಮ ಪಂಚಾಯಿತಿಗೆ ಚುನಾಯಿಸಲಾಗಿದೆ.

2. ಅನುಬಂಧ–ಬಿ ಅನ್ನು ಅನುಸರಿಸಿ, ದಿನಾಂಕ 19.05.2016 ರಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಾಗಿ ಮೊದಲ ಸಭೆಯನ್ನು ಕರೆಯುವುದಕ್ಕಾಗಿ ನೋಟೀಸ್ ನೀಡಿದ್ದು, ದಿನಾಂಕ 31.05.2016 ರಂದು 11.30ಕ್ಕೆ ಮುಂಚೆಯೇ ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ನಿಗದಿತ ಸಮಯವನ್ನು ನೀಡಲಾಗಿದೆಯೆಂಬುದು ಅರ್ಜಿದಾರರ ಪ್ರಕರಣವಾಗಿದೆ. ಆದರೆ ಆಕೆಯು ನಾಮಪತ್ರವನ್ನು ಸಲ್ಲಿಸಬೇಕೆಂದು ಉದ್ದೇಶಿಸಿರುವಾಗ, ಆಕೆಯ ಬೆಂಬಲಿಗರಲ್ಲಿ ಒಬ್ಬರಾದ ಶ್ರೀ ಬಿ.ಎನ್. ಪ್ರಕಾಶ್‌ರವರಿಗೆ ಹಿಂಬರಹ ಅನುಬಂಧ–ಸಿ ದಿನಾಂಕ 31.05.2016ನ್ನು ನೋಡಿ ಗೊತ್ತುಪಡಿಸಲಾದ ಅಧಿಕಾರಿಯ ಮೂಲಕ ತಿಳಿಸಲಾಗಿದ್ದು, 'ಚುನಾವಣೆ ನಡೆಸುವುದಕ್ಕಾಗಿ ಮತ್ತು ನಾಮಪತ್ರ ಸ್ವೀಕರಿಸುವುದಕ್ಕಾಗಿ ಹಾಗೂ ಸಭೆಯನ್ನು ನಡೆಸುವುದಕ್ಕೆ ಸಹ

ಶೇ. 50 ಸದಸ್ಯರು, ಹಾಜರಾಗತಕ್ಕದ್ದು ಮತ್ತು ಹೀಗಾಗಿ ಈ ಮಾಹಿತಿಯನ್ನು ನಿಮಗೆ ನೀಡಲಾಗಿದೆ' ಎಂದು ಭಾಷಾಂತರಿಸಲಾದ ಪ್ರತಿಯನ್ನು ದಾಖಲೆಯಲ್ಲಿರಿಸಲಾಗಿದೆ.

3. ರಿಟ್ ಅರ್ಜಿಯ 4ನೇ ಪ್ಯಾರಾದಲ್ಲಿ ಮಾಡಲಾದ ದೃಢೋಕ್ತಿಗಳನ್ನು ನೋಡಿ ರಿಟ್ ಅರ್ಜಿದಾರರ ಪ್ರಕಾರ ಸದರಿ ಹಿಂಬರಹ ಅಥವಾ ಪತ್ರವ್ಯವಹಾರ ಅನುಬಂಧ–ಸಿ ದೃಷ್ಟಿಯಿಂದ ಅರ್ಜಿದಾರಳು ಎರಡನೇ ಪ್ರತ್ಯರ್ಜಿದಾರರ ಕಚೇರಿಯಿಂದ ಹೊರಟರು ಮತ್ತು ಆಕೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಬೆಳಿಗ್ಗೆ 11.30ಕ್ಕೆ ಮುಂಚೆಯೇ ಅಂದರೆ ಸಾಕಷ್ಟು ಮುಂಚಿತವಾಗಿ ಹಿಂದಿರುಗಿದ್ದಾರೆ ಮತ್ತು ದಿನಾಂಕ 31.05.2016 ರಂದು ಬೆಳಿಗ್ಗೆ 11.30ಕ್ಕೆ ಮುಂಚೆಯೇ ಆಕೆ ನಾಮಪತ್ರವನ್ನು ಸಲ್ಲಿಸಿದ್ದಾರೆ.

4. ಸದರಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಾಗಿ ನಡೆಸಲು ನಿಗದಿಪಡಿಸಲಾಗಿದ್ದ ಸಭೆಯನ್ನು ಸದರಿ ದಿನಾಂಕ 31.05.2016 ರಂದು ನಡೆಸಲಾಗಿರುವುದಿಲ್ಲ, ಸದರಿ ಸಭೆಯಲ್ಲಿ ಅಗತ್ಯ ಸಂಖ್ಯೆಯ ಸದಸ್ಯರು(ಕೋರಂ) ಹಾಜರಾಗದೆ ಇದ್ದುದರಿಂದಾಗಿ ಸಭೆಯನ್ನು ಮುಂದಕ್ಕೆ ಹಾಕಲಾಗಿತ್ತು ಮತ್ತು ಈಗ ಅದನ್ನು ದಿನಾಂಕ 08.06.2016 ರಂದು ನಡೆಸಲು ನಿಗದಿಪಡಿಸಲಾಗಿದೆ.

5. ಸದರಿ ಹಿಂಬರಹ ಅನುಬಂಧ–ಸಿ ದಿನಾಂಕ 31.05.2016ನ್ನು ಅನುಬಂಧ–ಎಫ್ ನೋಡಿ ಅರ್ಜಿದಾರರ ಬೆಂಬಲಿಗರಲ್ಲಿ ಒಬ್ಬರಾದ ಶ್ರೀ ಬಿ.ಎನ್. ಪ್ರಕಾಶ್‌ರವರಿಗೆ ತಿಳಿಸಲಾಗಿದ್ದು, ಸದರಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರ ಹುದ್ದೆಗಾಗಿ ಶ್ರೀಮತಿ ಯಾಸ್ಮಿನ್‌ರ ಅಭ್ಯರ್ಥಿಕೆಯನ್ನು ಬೆಂಬಲಿಸುತ್ತಿದ್ದಾರೆಂಬುದಾಗಿ ಸದರಿ ಗ್ರಾಮ ಪಂಚಾಯಿತಿಯ 12 ಸದಸ್ಯರಿಂದ ಮಾಡಲಾದ ಘೋಷಣೆಯು, ಆ ಸಭೆಯನ್ನು ನಡೆಸುವುದಕ್ಕಿಂತ ಮುಂಚೆಯೇ ಆಕೆಯ ನಾಮಪತ್ರವನ್ನು ತಿರಸ್ಕರಿಸಲು 2ನೇ ಪ್ರತ್ಯರ್ಜಿದಾರರ ಉದ್ದೇಶಪೂರ್ವಕ ಪ್ರಯತ್ನವಾಗಿದೆ ಮತ್ತು ಆಕೆಯ ಅಭ್ಯರ್ಥಿಕೆಯನ್ನು ಬೆಂಬಲಿಸುವ ಸದಸ್ಯರ ಬಹುಮತವಿರುವುದರಿಂದ, ಆಕೆಯ ನಾಮಪತ್ರವನ್ನು ಅಂಗೀಕರಿಸಿದ್ದಲ್ಲಿ, ಸದರಿ

ಉಪಾಧ್ಯಕ್ಷರ ಹುದ್ದೆಗೆ ಆಕೆಯು ಚುನಾಯಿತಳಾಗಿರುತ್ತಿದ್ದರು. ಹಿಂಬರಹ ಅನುಬಂಧ–ಸಿ ದಿನಾಂಕ 31.05.2016ರ ದೃಷ್ಟಿಯಿಂದ ಇದನ್ನು ಮಾಡಿರುವುದಿಲ್ಲ. ಆದ್ದರಿಂದ, ಅವರು ರಿಟ್ ಅರ್ಜಿಯು ಪುರಸ್ಕರಿಸುವುದಕ್ಕೆ ಅರ್ಹವಾಗುತ್ತದೆ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಜಿದಾರಳಿಗೆ ಅನುಮತಿ ನೀಡುವಂತೆ ಎರಡನೇ ಪ್ರತ್ಯರ್ಜಿದಾರ–ಸಹಾಯಕ ನಿರ್ದೇಶಕರಿಗೆ ಅಗತ್ಯ ನಿರ್ದೇಶನಗಳನ್ನು ನೀಡಬಹುದೆಂದು ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಬಸವರಾಜು ಎಸ್. ಈ ನ್ಯಾಯಾಲಯದ ಮುಂದೆ ವಾದವನ್ನು ಮಂಡಿಸಿದ್ದಾರೆ.

6. ಬೇರೊಂದು ಕಡೆಯಲ್ಲಿ, ಅರ್ಜಿದಾರಳು ನಾಮಪತ್ರವನ್ನು ದಿನಾಂಕ 31.05.2016 ರಂದು ಬೆಳಿಗ್ಗೆ 11.30ಕ್ಕೆ ಮುಂಚೆ ಸಕಾಲದಲ್ಲಿ ಸಲ್ಲಿಸಿರುವುದಿಲ್ಲ ಮತ್ತು ಅವರ ಬಳಿ ಲಭ್ಯವಿರುವ ದಿನಾಂಕ 31.05.2016ರ ಮೂಲ ದಾಖಲೆಯ ಪ್ರಕಾರ, ಅರ್ಜಿದಾರಳು ತನ್ನ ನಾಮಪತ್ರವನ್ನು ದಿನಾಂಕ 31.05.2016 ರಂದು ಗೊತ್ತುಪಡಿಸಲಾದ ಸಮಯದ ತರುವಾಯ ಎಂದರೆ ಬೆಳಗ್ಗೆ 11.30ಕ್ಕೆ ಮುಂಚೆ ಎಂದು ನಿಗದಿತವಾಗಿದ್ದ ಸಮಯದ ತರುವಾಯ ಬೆಳಿಗ್ಗೆ 11.45ಕ್ಕೆ ವಿಳಂಬವಾಗಿ ಅರ್ಜಿದಾರಳು ತನ್ನ ನಾಮಪತ್ರವನ್ನು ಸಲ್ಲಿಸಿದ್ದಾರೆ ಎಂದು ಪ್ರತ್ಯರ್ಜಿದಾರ – ರಾಜ್ಯದ ಪರ ಹಾಜರಾದ ಮಾನ್ಯ ಎಜಿಎ ಶ್ರೀ ವಿ. ಶ್ರೀನಿಧಿ ರವರು ವಾದವನ್ನು ಮಂಡಿಸಿದ್ದಾರೆ. ಹಿಂಬರಹ ಅನುಬಂಧ–ಸಿ, ದಿನಾಂಕ 31.05.2016ನ್ನು, ಸದರಿ ಉಪಾಧ್ಯಕ್ಷ ಹುದ್ದೆಗಾಗಿ ಸ್ವತಃ ಅಭ್ಯರ್ಥಿಯಾಗಿರದ, ಶ್ರೀ ಬಿ.ಎನ್. ಪ್ರಕಾಶ್‌ರವರಿಗೆ ತಿಳಿಸಿದ್ದು, ಸ್ವತಃ ಅರ್ಜಿದಾರಳಾದ ಶ್ರೀಮತಿ ಯಾಸ್ಮಿನ್‌ರವರಿಗೆ ತಿಳಿಸಿರುವುದಿಲ್ಲ ಮತ್ತು ಅರ್ಜಿದಾರಳಾದ ಶ್ರೀಮತಿ ಯಾಸ್ಮಿನ್‌ರ ಅಭ್ಯರ್ಥಿಕೆಯನ್ನು ಬೆಂಬಲಿಸಿ ಗ್ರಾಮ ಪಂಚಾಯಿತಿಯ ಸದರಿ 12 ಸದಸ್ಯರಿಂದ ತಾತ್ಪರ್ಯವಾಗಿ ನೀಡಲಾಗಿರುವ ಅನುಬಂಧ–ಎಫ್, ದಾಖಲೆಯಿದ್ದರೂ ಸಹ, ಯಾರೇ ಪ್ರತ್ಯರ್ಜಿದಾರರಿಗೆ ತಿಳಿಸಿಲ್ಲ ಅಥವಾ ಸಲ್ಲಿಕೆಯ ಸ್ಥಳ ಮತ್ತು ದಿನಾಂಕವನ್ನು ಅದು ಹೊಂದಿಲ್ಲವೆಂದು ಸಹ ಅವರು ವಾದವನ್ನು ಮಂಡಿಸಿದ್ದಾರೆ.

7. ಇದಲ್ಲದೇ, ಅರ್ಜಿದಾರಳ ನಾಮಪತ್ರವನ್ನು, ದಿನಾಂಕ 31.05.2016 ರಂದು ನಿಗದಿತ ಸಮಯ ಬೆಳಿಗ್ಗೆ 11.30ಕ್ಕೆ ಮುಂಚೆ ಸಲ್ಲಿಸಿದ್ದಾರೆಂಬುದು ರಿಟ್

ಅರ್ಜಿಯ ಪ್ಯಾರಾ 4ರಲ್ಲಿ ಮಾಡಿದ ದೃಢೋಕ್ತಿಗಳನ್ನು ಅವರು ಗಂಭೀರವಾಗಿ ವಿವಾದಿಸಿರುತ್ತಾರೆ. ಸದರಿ ಹುದ್ದೆಗಾಗಿ ನಾಮಪತ್ರವನ್ನು ಸಲ್ಲಿಸುವುದಕ್ಕಾಗಿ ಸಮಯವನ್ನು, ಯಾವುದೇ ಸಂದರ್ಭಗಳ ಮೇರೆಗೆ 2ನೇ ಪ್ರತ್ಯರ್ಜಿದಾರರಿಂದ ವಿಸ್ತರಿಸಲಾಗದೆಂದು ಸಹ ಅವರು ವಾದವನ್ನು ಮಂಡಿಸಿದ್ದಾರೆ.

8. ಮಾನ್ಯ ನ್ಯಾಯವಾದಿಗಳ ದೀರ್ಘವಾದ ಅಹವಾಲನ್ನು ನಾನು ಆಲಿಸಿದ್ದೇನೆ ಮತ್ತು ರಿಟ್ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳನ್ನು ಮತ್ತು ದಾಖಲೆಯಲ್ಲಿನ ದಸ್ತಾವೇಜುಗಳನ್ನು ಪರಿಶೀಲಿಸಲಾಗಿದೆ.

9. ಹಿಂಬರಹ ಅನುಬಂಧ-ಸಿಯನ್ನು, ಸದರಿ ಗ್ರಾಮ ಪಂಚಾಯಿತಿಯ ಸದಸ್ಯರಾದ ಬಿ.ಎನ್. ಪ್ರಕಾಶ್‌ರವರಿಗೆ ಬರೆಯಲಾಗಿದೆಯೇ ಹೊರತು ಅರ್ಜಿದಾರ ಶ್ರೀಮತಿ ಯಾಸ್ಮಿನ್‌ರವರಿಗೆ ಅಲ್ಲ ಎಂಬುದನ್ನು ಸಂತೋಷವಾಗಿ ವ್ಯಕ್ತಪಡಿಸಿಲ್ಲ ಮತ್ತು ಅದನ್ನು ಬಹಳ ಸರಿಯಾಗಿಯೂ ಭಾಷಾಂತರಿಸಿರುವುದಿಲ್ಲ ಎಂಬುದು ನಿಜ. ಆದರೆ ಸದರಿ ಪ್ರಾಧಿಕಾರದಿಂದ ಕಾನೂನಿನ ಸೂಕ್ತ ಉಪಬಂಧಗಳ ತಪ್ಪು ಗ್ರಹಿಕೆಯಿಂದ ನೀಡಲಾಗಿರುವುದಾಗಿ ಕಂಡು ಬಂದಿರುತ್ತದೆ.

10. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು, 1995 ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತ್‌ಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು, 1994ರ 3ಎ, 3ಬಿ ಮತ್ತು 3ಡಿ ನಿಯಮಗಳಿಗೆ ಸಮಾನವಾಗಿವೆ ಮತ್ತು ಅದೇ ಅರ್ಹತೆಯನ್ನು ಹೊಂದಿರುವುದರಿಂದ, ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಾಗಿ ವಿವಿಧ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ನಿಗದಿತ ಸಮಯವನ್ನು ವಿಸ್ತರಿಸಲು ಚುನಾವಣಾಧಿಕಾರಿಗೆ ಯಾವುದೇ ವಿವೇಚನಾಧಿಕಾರವಿರುವುದಿಲ್ಲ. ವಾಸ್ತವಿಕ ಚುನಾವಣೆ ಅಥವಾ ಚುನಾವಣೆಗಾಗಿ ಮತಹಾಕಲು, ಆ ಸಭೆಯ ನೋಟೀಸಿನ ಪ್ರಕಾರ ಅಗತ್ಯವಿದ್ದಲ್ಲಿ, ಆ ಸಭೆಗಾಗಿ ಕೋರಂನ ಹಾಜರಾತಿಗೆ ಅಗತ್ಯಪಡಿಸಿದ್ದು,

ನಾಮಪತ್ರಗಳನ್ನು ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಸದಸ್ಯರ ಕೋರಂ ಅಗತ್ಯವಿರುವುದಿಲ್ಲ. ಆದ್ದರಿಂದ, ಹಿಂಬರಹ ಅನುಬಂಧ–ಸಿಯನ್ನು ಸದರಿ ಹುದ್ದೆಗೆ ಅಭ್ಯರ್ಥಿಯಾಗಿರದ ಬಿ.ಎನ್. ಪ್ರಕಾಶ್‌ರವರಿಗೆ ಬರೆಯಲಾಗಿದ್ದರೂ, ಅದನ್ನು ಮೇಲ್ನೋಟಕ್ಕೆ ಕಾಣುವಂತೆ ಅರ್ಥೈಸಲಾಗಿದ್ದು, ಹೆಚ್ಚೆಂದರೆ ಅದು ಸುಸಂಬದ್ಧ ಕಾನೂನು ಉಪಬಂಧಗಳ ತಪ್ಪುಗ್ರಹಿಕೆಯಾಗಿದೆ. ಆದರೆ, ಹಾಗಾಗಿದ್ದರೂ ವಿಳಂಬವಾಗಿ ಸಹ ಆಕೆ ನಾಮಪತ್ರವನ್ನು ಸಲ್ಲಿಸಲು ಮತ್ತು ನಾಮಪತ್ರವನ್ನು ಸಹ ಹಾಗೇ ವಿಳಂಬವಾಗಿ ಸಲ್ಲಿಸಿರುವುದನ್ನು ಅಂಗೀಕರಿಸಲು ಚುನಾವಣಾಧಿಕಾರಿಗೆ ಈ ನ್ಯಾಯಾಲಯದಿಂದ ಪರಮಾದೇಶ ನಿರ್ದೇಶನಕ್ಕಾಗಿ ಕೋರಲು ಹಾಗೂ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ/ಉಪಾಧ್ಯಕ್ಷ ಹುದ್ದೆಯ ಚುನಾವಣೆಗಾಗಿ ಆಕೆ ಸ್ಪರ್ಧಿಸಿರುವುದನ್ನು ಪುರಸ್ಕರಿಸಲು ಅರ್ಜಿದಾರರಿಗೆ ಅಧಿಕಾರ ಕೊಡುವುದಿಲ್ಲ.

11. ರಿಟ್ ಅರ್ಜಿಯ ಪ್ಯಾರಾ 4ರಲ್ಲಿ ಮಾಡಿದ ದೃಢೋಕ್ತಿಗಳು ಸಹ ಅಸ್ಪಷ್ಟವಾಗಿವೆ. ನಾಮಪತ್ರವನ್ನು ಸಲ್ಲಿಸಲೂ ಸಹ ಶೇ.50ಕೋರಂ ಅಗತ್ಯವಿರುತ್ತದೆ ಎಂದು ಅರ್ಜಿದಾರರು 2ನೇ ಪ್ರತ್ಯರ್ಜಿದಾರರಿಗೆ ಪ್ರವರ್ಗೀಯವಾಗಿ ಮಾಹಿತಿ ನೀಡಿರುವುದರಿಂದ, 2ನೇ ಪ್ರತ್ಯರ್ಜಿದಾರರ ಕಛೇರಿಯಿಂದ ಅರ್ಜಿದಾರರು ಹೊರಟಿದ್ದಾರೆ ಮತ್ತು ಆಕೆ ತನ್ನ ನಾಮಪತ್ರವನ್ನು ಸಲ್ಲಿಸಲು ಸಾಕಷ್ಟು ಮುಂಚಿತವಾಗಿ ಎಂದರೆ 11.30ಕ್ಕೆ ಮುಂಚೆಯೇ ಹಿಂದಿರುಗಿದ್ದಾರೆಂದು, 4ನೇ ಪ್ಯಾರಾದ ತರುವಾಯದ ಭಾಗದಲ್ಲಿ ಅರ್ಜಿದಾರರು ಹೇಳಿದ್ದಾರೆ. ಎರಡನೇ ಪ್ರತ್ಯರ್ಜಿದಾರರ ಕಛೇರಿಗೆ ಆಕೆ ಭೇಟಿ ನೀಡಿದ ಖಚಿತ ಸಮಯ ಮತ್ತು ಅನುಬಂಧ–ಸಿ, ಪತ್ರವ್ಯವಹಾರದ ಬಗ್ಗೆ ತಿಳಿದ ಮೇಲೆ, ಆಕೆಯು ಸದರಿ ಕಛೇರಿಯಿಂದ ಹೋಗಿದ್ದು ಮತ್ತು ಆಕೆ ಸದರಿ ಕಛೇರಿಗೆ ಹಿಂದಿರುಗಿರುವುದನ್ನು, ರಿಟ್ ಅರ್ಜಿಯ ಪ್ಯಾರಾ 4ರಲ್ಲಿ ನಮೂದಿಸಿರುವುದಿಲ್ಲ. ಅದಕ್ಕೆ ಕಾರಣಗಳನ್ನು ಅರ್ಜಿದಾರರೇ ಚೆನ್ನಾಗಿ ಬಲ್ಲರು. ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿರುವಾಗ ಮತ್ತು ಆಕೆಯ ಅಭ್ಯರ್ಥಿಕೆಯ ಬಗ್ಗೆ ಮತ್ತು ಕಾನೂನು ನ್ಯಾಯಾಲಯದಲ್ಲಿ ಆಕೆಯ ನಾಮಪತ್ರವನ್ನು ಸ್ವೀಕರಿಸಿದ ಬಗ್ಗೆ ಪ್ರಶ್ನೆಯನ್ನು ಎತ್ತಲು ಅರ್ಜಿದಾರರು ಇಚ್ಛಿಸಿದ್ದಾಗ, ಅಂಥ ದೃಢೋಕ್ತಿಗಳು ಮತ್ತು ಸಾಕ್ಷ್ಯದ ಮೇಲೆ ಅವಲಂಬಿಸಲು ಅಗತ್ಯವಾದ

ಸಾಕ್ಷ್ಯದೊಂದಿಗೆ ಖಚಿತವಾದ ಸಮಯವನ್ನು ನಮೂದಿಸುವುದು ಅವಶ್ಯಕವಾಗಿದೆ. "ಎರಡನೇ ಪ್ರತ್ಯರ್ಜಿದಾರ ಕಛೇರಿಯನ್ನು ಬಿಟ್ಟರು ಮತ್ತು ಸಾಕಷ್ಟು ಮುಂಚಿತವಾಗಿ ಹಿಂದಿರುಗಿದ್ದಾರೆ" ಎಂಬ ಪದಗಳು ಯಾವ ಸಮಯದಲ್ಲಿ ಅದೆಲ್ಲವೂ ಘಟಿಸಿತು ಎಂಬುದರ ಯಾವುದೇ ಸುಳಿವು ನೀಡುವುದಿಲ್ಲ. ಅಂಥ ಪತ್ರವನ್ನು ಆಕೆಯ ಬೆಂಬಲಿಗರಾದ ಶ್ರೀ ಬಿ.ಎನ್. ಪ್ರಕಾಶ್ ಸ್ವೀಕರಿಸಿರಲಿ ಅಥವಾ ಆಕೆ ಸ್ವತಃ ತಾನೇ ಸ್ವೀಕರಿಸಿರಲಿ, ಪ್ರತ್ಯರ್ಜಿದಾರ ಅಧಿಕಾರಿಯಾಗಲಿ ಅಥವಾ ಅರ್ಜಿದಾರರಾಗಲಿ, ಅನುಬಂಧ-ಸಿ, ಪತ್ರವ್ಯವಹಾರ ದಿನಾಂಕ 31.05.2016ರ ಮೇಲೆ ಯಾವುದೇ ಹಿಂಬರಹ ನೀಡಿರುವುದಿಲ್ಲ.

12. ಇದಕ್ಕೆ ವಿರುದ್ಧವಾಗಿ ನಾಮಪತ್ರವನ್ನು, ಎರಡನೇ ಪ್ರತ್ಯರ್ಜಿದಾರರ ಕಛೇರಿಯಲ್ಲಿ ಬೆಳಿಗ್ಗೆ 11.45ಕ್ಕೆ ಸಲ್ಲಿಸಿದ್ದು, ಅದು ಸರಿಯಾಗಿರುವಂತೆ ಕಂಡುಬರುತ್ತದೆಂದು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಮೂಲ ದಾಖಲೆಯಿಂದ ಪ್ರತ್ಯರ್ಜಿದಾರರ ವಾದವು ಸಮರ್ಥಿತವಾಗಿದೆ.

13. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಯು, ಸದರಿ ಮೂಲ ವರದಿಯ ಆಧಾರದ ಮೇಲೆ ನಿವೇದನೆ ಮಾಡಿಕೊಳ್ಳಲು ಸಹ ಕೋರಿದ್ದು, ದಿನಾಂಕ 31.05.2016ರ ವ್ಯವಹರಣೆಗಳನ್ನು ಸಂಕ್ಷಿಪ್ತ ದಾಖಲೆಯ ರಿಜಿಸ್ಟರ್‌ನಲ್ಲಿ, ಬೆಳಿಗ್ಗೆ 11.45 ರಲ್ಲಿ ಈಗಿನ ಅರ್ಜಿದಾರರು ನಾಮಪತ್ರವನ್ನು ಸಲ್ಲಿಸುವ ಸಮಯದ ಬಗೆಗಿನ ಆದೇಶವು ಪ್ರಕ್ಷಿಪ್ತವಾಗಿದೆಯೆಂದು ಎರಡನೇ ಪ್ರತ್ಯರ್ಜಿದಾರರಿಂದ ದಾಖಲಿಸಲಾಗಿದ್ದು, ನಾಮಪತ್ರದ ಪರಿಶೀಲನೆಯನ್ನು ಬೆಳಗ್ಗೆ 11.30 ರಿಂದ 11.45ರ ನಡುವೆ ಮಾಡಲಾಗಿರುವುದರಿಂದ ಮತ್ತು ಉಪಾಧ್ಯಕ್ಷರ ಹುದ್ದೆಗಾಗಿ ಎರಡು ನಾಮಪತ್ರಗಳನ್ನು ಸ್ವೀಕರಿಸಲಾಗಿದೆ ಎಂದು ಸದರಿ ಎರಡನೇ ಪ್ರತ್ಯರ್ಜಿದಾರರು ದಾಖಲಿಸಿದ್ದಾರೆ. ಆದ್ದರಿಂದ, ಅರ್ಜಿದಾರರ ನಾಮಪತ್ರವನ್ನು ಬೆಳಗ್ಗೆ 11.45ಕ್ಕೇ ಸ್ವೀಕರಿಸಿದ್ದಲ್ಲಿ, ಬೆಳಗ್ಗೆ 11.30 ಮತ್ತು 11.45ರ ನಡುವೆ ಅದರ ಪರಿಶೀಲನೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

14. ಈ ನಿವೇದನೆಯನ್ನು ಮಾನ್ಯ ಎಜಿಎ ಶ್ರೀ ವಿ. ಶ್ರೀನಿಧಿಯವರು ದಾಖಲೆಯ ಸಹಾಯದಿಂದಲೇ ವಿವರಿಸಿದ್ದು, ಅದನ್ನು ಕನ್ನಡ ಭಾಷೆಯಲ್ಲಿ ದಾಖಲಿಸಲಾಗಿದೆ (ಅದರ ಆಂಗ್ಲ ಭಾಷಾಂತರವನ್ನು ಮಾನ್ಯ ನ್ಯಾಯವಾದಿಗಳು ಜಂಟಿಯಾಗಿ ಮಾಡಿರುತ್ತಾರೆ) ಮತ್ತು ಸದರಿ ರಿಜಿಸ್ಟರ್‌ನಲ್ಲಿ ಅದನ್ನು ಸೇರ್ಪಡೆ ಮಾಡಿಲ್ಲವೆಂದು ಮತ್ತು ಅರ್ಜಿದಾರರ ನಾಮಪತ್ರವನ್ನು, ಬೆಳಗ್ಗೆ 11.45ಕ್ಕೆ ದಾಖಲಿಸಲಾಗಿದೆಯೆಂದು 2ನೇ ಪ್ರತ್ಯರ್ಜಿದಾರರು ರಿಜಿಸ್ಟರ್‌ನಲ್ಲೇ ಸದರಿ ವ್ಯವಹರಣೆಗಳಲ್ಲಿ ಪ್ರತ್ಯೇಕವಾಗಿ ಟಿಪ್ಪಣಿ ಮಾಡಿರುತ್ತಾರೆಂದು ನಿವೇದಿಸಿದ್ದಾರೆ ಹಾಗೂ ಅರ್ಜಿದಾರರಿಂದ ನಾಮಪತ್ರ ಸಲ್ಲಿಕೆಯು ಗೊತ್ತುಪಡಿಸಲಾದ ಸಮಯವನ್ನು ಮೀರಿದೆಯೆಂದು ಅವರು ಒತ್ತಿ ಹೇಳಿದ್ದಾರೆ. ಅನುಬಂಧ–ಬಿ ದಿನಾಂಕ 19.05.2016ನ್ನು ನೋಡಿ ಚುನಾವಣಾ ಪ್ರಕ್ರಿಯೆಯ ಕ್ಯಾಲೆಂಡರ್ ಪ್ರಕಾರ, ನಾಮಪತ್ರಗಳನ್ನು ಬೆಳಗ್ಗೆ 11.30ಕ್ಕೆ ಮುಂಚೆ ಸಲ್ಲಿಸಬೇಕಿತ್ತು ಮತ್ತು ಅವುಗಳ ಪರಿಶೀಲನೆಯನ್ನು ಬೆಳಗ್ಗೆ 11.30 ಮತ್ತು 11.45ರ ನಡುವೆ ನಡೆಸಬೇಕಿತ್ತು ಮತ್ತು ಅದರ ತರುವಾಯ, ನಾಮಪತ್ರವನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಅನುಮತಿಸಲಾಗಿದ್ದ ಅವಧಿಯು ಮಧ್ಯಾಹ್ನ 11.45 ರಿಂದ 12ರ ವರೆಗೆ ನಿಗದಿತವಾಗಿತ್ತು ಎಂದು ಸಹ ಅವರು ವಾದವನ್ನು ಮಂಡಿಸಿದ್ದಾರೆ. ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ತರುವಾಯ ಅಗತ್ಯವಿದ್ದಲ್ಲಿ, ಚುನಾವಣೆಯನ್ನು ನಡೆಸಬೇಕಿತ್ತು.

15. ಅರ್ಜಿದಾರರ ನಾಮಪತ್ರವನ್ನು ತಿರಸ್ಕರಿಸುವಲ್ಲಿ ಎರಡನೇ ಪ್ರತ್ಯರ್ಜಿದಾರರ ಕಡೆಯಿಂದ ಯಾವುದೇ ದುರ್ಭಾವನೆಯಾಗಿರುವುದಿಲ್ಲ, ಗೊತ್ತುಪಡಿಸಲಾದ ಸಮಯ ಬೆಳಗ್ಗೆ 11.30ರ ತರುವಾಯ ಮಾತ್ರ ಅದನ್ನು ಸ್ವೀಕರಿಸಿದ್ದ ಕಾರಣ ಅದನ್ನು ತಿರಸ್ಕರಿಸಲಾಯಿತೆಂದು ಮಾನ್ಯ ಎಜಿಎ ರವರು ಮುಂದುವರೆದು ವಾದವನ್ನು ಮಂಡಿಸಿದ್ದಾರೆ.

16. ಅರ್ಜಿದಾರರಳಿಂದ ನಾಮಪತ್ರವನ್ನು ಸಲ್ಲಿಸಿದ ವಾಸ್ತವಿಕ ಸಮಯದ ಬಗೆಗಿನ ವಿವಾದವು, ಪ್ರಸ್ತುತ ಪ್ರಕರಣದಲ್ಲಿನ ಸಂಗತಿಯು ಗಂಭೀರವಾದ ವಿವಾದಿತ ಪ್ರಶ್ನೆಯಾಗಿದೆ ಮತ್ತು ಇದನ್ನು ಭಾರತ ಸಂವಿಧಾನದ 226ನೇ ಅನುಚ್ಛೇದದ

ಅಡಿಯಲ್ಲಿ ಈ ನ್ಯಾಯಾಲಯದ ಅಸಾಧಾರಣ ರಿಟ್ ಅಧಿಕಾರ ವ್ಯಾಪ್ತಿಯಲ್ಲಿ ಪ್ರಶ್ನೆ ಎತ್ತಲಾಗದು ಅಥವಾ ನಿರ್ಧರಿಸಲಾಗದೆಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ. ಸದರಿ ಹುದ್ದೆಗಾಗಿ ನಾಮಪತ್ರವನ್ನು ಸಲ್ಲಿಸುವುದಕ್ಕಾಗಿ ಸಮಯದ ಚೌಕಟ್ಟನ್ನು ನೀಡಿರುವಾಗ ಮತ್ತು ಮೇಲ್ನೋಟಕ್ಕೆ, ಕಾಲಪರಿಮಿತಿಯನ್ನು ವಿಸ್ತರಿಸಲು ಪ್ರತ್ಯರ್ಜಿದಾರ/ಅಧಿಕಾರಿಗೆ ಅಧಿಕಾರವಿಲ್ಲದೇ ಇರುವಾಗ, ವಿವರವಾದ ಆಕ್ಷೇಪಣಾ ಪಟ್ಟಿಯನ್ನು ಇನ್ನೂ ಸಲ್ಲಿಸಬೇಕಾಗಿದ್ದರೂ, ಮೂಲದಾಖಲೆಯ ಸಹಾಯದೊಂದಿಗೆ ಈ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರರು ನಾಮಪತ್ರವನ್ನು ಬೆಳಗ್ಗೆ 11.45ಕ್ಕೆ ಸಲ್ಲಿಸಲಾಗಿದೆಯೆಂದು ಹೇಳಿದ್ದಲ್ಲಿ, ಮೂಲದಾಖಲೆಯಲ್ಲಿ ಹಾಗೆ ಪ್ರವರ್ಗೀಯವಾಗಿ ದಾಖಲಿಸಿದ ಟಿಪ್ಪಣಿಗೆ ವಿರುದ್ಧವಾಗಿ, ಮೇಲೆ ಉದ್ಧರಿಸಲಾದಂತೆ, ಅರ್ಜಿದಾರರು ನಾಮಪತ್ರವನ್ನು ಸಲ್ಲಿಸಲು ಬೆಳಗ್ಗೆ 11.30ಕ್ಕೆ ಸಾಕಷ್ಟು ಮುಂಚೆಯೇ ಹಿಂದಿರುಗಿದ್ದಾರೆಂಬುದನ್ನು ಪರಮ ಸತ್ಯವಾಗಿ ತೆಗೆದುಕೊಳ್ಳಲಾಗದು.

17. ಪ್ರಸ್ತುತ ರಿಟ್ ಅರ್ಜಿಯಲ್ಲಿ ಅನುಮತಿಸಲು ಕೋರಲಾದ ಅದೇ ಆಧಾರದ ಹಿನ್ನೆಲೆಯಲ್ಲಿ, ಸದರಿ ದೃಢೋಕ್ತಿಗಳನ್ನು, ಪ್ರತ್ಯರ್ಜಿದಾರನ ಕಛೇರಿಯಲ್ಲಿ ಯಾರೇ ಅಧಿಕಾರಿಗೆ ಎಂದೂ ನೀಡಿರದಂಥ ಅನುಬಂಧ–ಎಫ್‌ನ್ನು ನೋಡಿ ಆಕೆಯ ಬೆಂಬಲಿಗರಲ್ಲಿ ಒಬ್ಬರಾದ, ಶ್ರೀ ಬಿ.ಎನ್. ಪ್ರಕಾಶ್‌ರಿಗೆ ಅನುಬಂಧ–ಸಿ, ಹಿಂಬರಹವನ್ನು ನೀಡಬೇಕಿತ್ತೆಂದು ಮತ್ತು ತಮ್ಮ ರಿಟ್ ಅರ್ಜಿಯ ಉದ್ದೇಶಕ್ಕಾಗಿ ಮಾತ್ರ ಅದನ್ನು ಹಾಜರಿಪಡಿಸಿದ್ದು, ಸದರಿ ಹಿಂಬರಹದಿಂದ ಅರ್ಜಿದಾರರನ್ನು, ತಪ್ಪುದಾರಿಗೆ ಎಳೆಯಲಾಗಿದೆಯೆಂದು ಮತ್ತು ಆಕೆಯು ಸದರಿ ಕಛೇರಿಯನ್ನು ಬಿಟ್ಟು ಹೊರಟಿದ್ದಾರೆ ಮತ್ತು ನಾಮಪತ್ರವನ್ನು ಸಲ್ಲಿಸಲು ಸಕಾಲಕ್ಕೆ ಹಿಂದಿರುಗಿದ್ದಾರೆಂದು ಮತ್ತು ಅದನ್ನು ವಾಸ್ತವಿಕವಾಗಿ ಸಲ್ಲಿಸಲಾಗಿದೆಯೆಂದು ಮೇಲ್ನೋಟಕ್ಕೆ ಕಾಣುವಂತೆ ಅರ್ಥೈಸಲಾಗದು. ಎರಡನೇ ಪ್ರತ್ಯರ್ಜಿದಾರರ ವೈಯಕ್ತಿಕ ದುರ್ಭಾವನೆಯ ಯಾವುವೇ ಆಪಾದನೆಗಳನ್ನು ರಿಟ್ ಅರ್ಜಿಯ ಪ್ಯಾರಾ 6 ರಲ್ಲಿ ಕಾನೂನಿನ ದೃಷ್ಟಿಯಲ್ಲಿ ದೋಷಕ್ಕೆ ಸಂಬಂಧಿಸಿದ ದೃಢೋಕ್ತಿಗಳನ್ನು ಹೊರತುಪಡಿಸಿ, ಅರ್ಜಿದಾರರಿಂದ ಸಲ್ಲಿಸಲಾದ ರಿಟ್ ಅರ್ಜಿಯಲ್ಲಿ ಮತ್ತು ಅರ್ಜಿದಾರರಿಂದ ಎತ್ತಲಾದ 'ಸಾಂಸ್ಥಿಕ ಸಮಗ್ರತೆ'ಯ ವಾದದಲ್ಲಿ ಆಪಾದಿಸಲಾಗಿಲ್ಲ.

18. ದುರ್ಭಾವನೆಗಳು ಮತ್ತು ಸಾಂಸ್ಥಿಕ ಸಮಗ್ರತೆ ಬಗೆಗಿನ ಅಂಥ ದೃಢೋಕ್ತಿಗಳು ಅಸ್ಪಷ್ಟವಾಗಿದ್ದು, ಅವರು ಯಾವುದೇ ವಿಷಯವನ್ನು ಹೊಂದಿದ್ದೇ ಆದರೆ, ಮೊದಲಿಗೆ, ವಾಸ್ತವವಾಗಿ ದುರುದ್ದೇಶದ ದೃಢೋಕ್ತಿಗಳನ್ನು ಸ್ಪಷ್ಟವಾಗಿ ಸಮರ್ಥಿಸಬೇಕಾಗುತ್ತದೆ ಮತ್ತು ಸಾಕ್ಷ್ಯದ ಸಹಾಯದೊಂದಿಗೆ ಕ್ರಮಬದ್ಧವಾಗಿ ರುಜುವಾತುಪಡಿಸಬೇಕಾಗುತ್ತದೆ. ಕಾನೂನಿನ ದೃಷ್ಟಿಯಲ್ಲಿ ಅಂಥ ಪೂರ್ವಭಾವಿತವಾದ ದೋಷವನ್ನು ಸಾರ್ವಜನಿಕ ಪ್ರಾಧಿಕಾರದ ವಿರುದ್ಧ ಊಹಿಸಲಾಗದು. ಈ ನ್ಯಾಯಾಲಯವು, ರಿಟ್ ಅರ್ಜಿಯಲ್ಲಿ ಹೇಳಲಾದ ಯಾವುದೇ ಆಧಾರವಿಲ್ಲದ ಅಂಥ ಮನವಿಗಳನ್ನು ಅಂಗೀಕರಿಸುವುದಕ್ಕೆ ಒಲವು ತೋರದು. ಅದು ತಿರಸ್ಕರಿಸುವುದಕ್ಕೆ ಅರ್ಹವಾಗಿದೆ ಮತ್ತು ಅದಕ್ಕನುಸಾರವಾಗಿ ತಿರಸ್ಕರಿಸಲಾಗಿದೆ.

19. ಈ ಹಿಂದೆ ಹೇಳಿದಂತೆ ಅಲ್ಲದೆ, ಅರ್ಜಿದಾರರು ಸದರಿ ನಾಮಪತ್ರವನ್ನು ವಿಳಂಬವಾಗಿ ಸಲ್ಲಿಸಿದ್ದು, ಸುಸಂಬದ್ಧ ನಿಯಮಗಳಿಗೆ ಅನುಸಾರವಾಗಿ ಸದರಿ ನಾಮಪತ್ರವು ಸಿಂಧುವಾಗದು ಮತ್ತು ನಿರ್ದಿಷ್ಟಪಡಿಸಲಾದ ಸಮಯವನ್ನು ಮೀರಿ ಸಲ್ಲಿಸಲಾಗಿದ್ದರೂ, ಅಂಥ ನಾಮಪತ್ರವನ್ನು ಅಂಗೀಕರಿಸಲು ಪ್ರತ್ಯರ್ಜಿದಾರ ಅಧಿಕಾರಿಗೆ ಪರಮಾದೇಶ ನಿರ್ದೇಶನ ನೀಡಲಾಗದೆಂದು ಸಹ ಈ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

20. ಹಾಗಾಗಿ ಈ ರಿಟ್ ಅರ್ಜಿಯಲ್ಲಿ ಯಾವುದೇ ರೀತಿಯ ಗುಣಾರ್ಹತೆ ಕಂಡುಬಂದಿಲ್ಲ ಮತ್ತು ವಜಾಗೊಳಿಸುವುದಕ್ಕೆ ಅರ್ಹವಾಗಿದೆ ಹಾಗೂ ಅದಕ್ಕೆ ಅನುಸಾರವಾಗಿ ವಜಾಗೊಳಿಸಲಾಗಿದೆ. ವೆಚ್ಚಗಳಿರುವುದಿಲ್ಲ.

---